# e ಜೀವನ

## ಇ-ಆಡಳಿತ

ಇ-ಆಡಳಿತ, ಇ-ಸರ್ಕಾರ ಮುಂತಾದ ಪದಗಳು ಆಗಿಂದಾಗ್ಗೆ ಸರ್ಕಾರಿ ವಲಯಗಳಿಂದ ಕೇಳಿಬರುತ್ತವೆ. ಏನೀ ಇ-ಆಡಳಿತ? ನಮ್ಮ ದೇಶದಲ್ಲಿ ಇ-ಆಡಳಿತವನ್ನು ಜಾರಿಗೆ ತರುವುದು ಸಾಧ್ಯವೇ? ಇ-ಸರ್ಕಾರವನ್ನು ಜಾರಿಗೆ ತರುವಲ್ಲಿ ನಮ್ಮ ಸರ್ಕಾರಗಳು ಮಾಡಬೇಕಾದ ಪ್ರಯತ್ನಗಳೇನು?

ಮೊದಲಿಗೆ ಇ-ಸರ್ಕಾರವೆಂದರೇನು, ಅದರಿಂದ ಸಾರ್ವಜನಿಕರಿಗಾಗಬಹುದಾದ ಉಪಯೋಗಗಳೇನು ಎಂದು ತಿಳಿದುಕೊಳ್ಳೋಣ. ಇ-ಸರ್ಕಾರವೆಂಬುದು ಒಂದು ಹೊಸ ರೀತಿಯ ಸರ್ಕಾರವೇನೂ ಅಲ್ಲ, ಅಥವಾ ಇದನ್ನು ಜಾರಿಗೆ ತರುವುದರಿಂದ, ನಾವೆಲ್ಲರೂ ಕಂಪ್ಯೂಟರ್‌ಗಳ ನಿಯಂತ್ರಣಕ್ಕೊಳಗಾಗಬೇಕೇ ಎಂಬ ಭೀತಿ ಬೇಕಿಲ್ಲ. ಸರ್ಕಾರದ ಕಾರ್ಯವೈಖರಿಯಲ್ಲಿ ಮತ್ತು ಆಡಳಿತಾತ್ಮಕ ಶೈಲಿಯಲ್ಲಿ ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿ, ಜನಸಾಮಾನ್ಯರಿಗೆ ಅನುಕೂಲಮಾಡಿಕೊಡುವುದೇ ಇ-ಸರ್ಕಾರದ ಮುಖ್ಯೋದ್ದೇಶ. ಹಾಗಿದ್ದರೆ ಇದನ್ನು ಜಾರಿಗೆ ತರುವುದು ಹೇಗೆ?

ಸೂಕ್ಷ್ಮವಾಗಿ ಗಮನಿಸಿದರೆ ನಮ್ಮ ರಾಜ್ಯದಲ್ಲೇ ನಾವು ಅನೇಕ ಕ್ಷೇತ್ರಗಳಲ್ಲಿ ಇ-ಆಡಳಿತದ ಬಳಕೆಯನ್ನು ಕಾಣುತ್ತಿದ್ದೇವೆ. ಉದಾಹರಣೆಗೆ, ವಾಹನ ಲೈಸನ್ಸ್ ಪಡೆಯುವ ಪ್ರಕ್ರಿಯೆಯಲ್ಲಿ ಆರ್‌ಟಿಓ (ಪ್ರಾಂತೀಯ ಸಾರಿಗೆ ಕಚೇರಿ) ಕಚೇರಿಯೊಂದಿಗೆ ವ್ಯವಹಾರದಲ್ಲಿ ಬದಲಾವಣೆ. ಈ ಹಿಂದೆ ಕಲಿಕೆಯ ಲೈಸನ್ಸ್ ಪಡೆಯಲು ಸಹ ಉದ್ದ ಸಾಲುಗಳಲ್ಲಿ ನಿಂತು, ಸಿಬ್ಬಂದಿಯ ಕಿರಿಕಿರಿಯನ್ನು ಸಹಿಸಿಕೊಂಡು, ಎಲ್ಲ ಪರೀಕ್ಷೆಗಳಲ್ಲಿ ಉತ್ತೀರ್ಣರಾದಾಗ್ಯೂ ಜನಸಾಮಾನ್ಯರು, ಲಂಚಕೊಟ್ಟು ಪರವಾನಗಿ ಪಡೆಯುವ ಪರಿಸ್ಥಿತಿಯಿತ್ತು. ಈಗ ಅದು ಬದಲಾಗಿದೆ. ನಿಗದಿತ ಶುಲ್ಕ ಕಟ್ಟಿ, ಕಂಪ್ಯೂಟರ್ ಕೇಳುವ ಹತ್ತು ಪ್ರಶ್ನೆಗಳಿಗೆ ಉತ್ತರ ನೀಡಿ, ಕಂಪ್ಯೂಟರ್ ಚಾಲಿತ ಕ್ಯಾಮರಾದಲ್ಲಿ ಫೋಟೋ ಹಿಡಿಸಿದರಾಯಿತು. ಕೆಲವೇ ನಿಮಿಷಗಳಲ್ಲಿ ಲೈಸನ್ಸ್ ನಿಮ್ಮ ಕೈಸೇರುತ್ತದೆ. ಆರ್‌ಟಿಓ ಕಾರ್ಯವೈಖರಿಯಲ್ಲಿ ಇನ್ನೂ ಸಾಕಷ್ಟು ಬದಲಾವಣೆ ಆಗಬೇಕಿದ್ದರೂ, ಈ ಮೇಲಿನ ಉದಾಹರಣೆ ಇ-ಆಡಳಿತದ ಬಳಕೆಯಿಂದ ಸರ್ಕಾರಿ ಕೆಲಸಗಳು ಎಷ್ಟು ಸುಗಮವಾಗುತ್ತವೆ ಎಂಬುದನ್ನು ತೋರಿಸಿಕೊಡುತ್ತದೆ. ಕ್ಷಿಪ್ರಗತಿಯಲ್ಲಿ ಸಾರ್ವಜನಿಕ ಸವಲತ್ತುಗಳ ನೀಡಿಕೆ, ಮಧ್ಯವರ್ತಿಗಳ ನಿವಾರಣೆ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಭ್ರಷ್ಟಾಚಾರದ ನಿರ್ಮೂಲನೆ ಇ-ಆಡಳಿತದಿಂದ ಸಾಧ್ಯ.

ನಮ್ಮ ಆಡಳಿತಾತ್ಮಕ ಸರ್ಕಾರಗಳು ಇ-ಆಡಳಿತವನ್ನು ಇನ್ನೂ ಅನೇಕ ಕ್ಷೇತ್ರಗಳಲ್ಲಿ ಪರಿಣಾಮಕಾರಿಯಾಗಿ ಉಪಯೋಗಿಸಬಹುದಾಗಿದೆ. ಸಾರ್ವಜನಿಕರು ನೇರವಾಗಿ ಸರ್ಕಾರದೊಂದಿಗೆ ಸಂಪರ್ಕಿಸಬೇಕಾದ ಕೆಲವು ನಿತ್ಯಕಾರ್ಯಗಳಲ್ಲಿ ಕಂಪ್ಯೂಟರ್‌ಗಳನ್ನು ಸರ್ಕಾರ ಅಳವಡಿಸಬಹುದು. ಕೆಲವಾರು ಸಾಮಾನ್ಯ ಕಾನೂನು ವ್ಯವಹಾರಗಳು, ಮತ್ತು ಸರ್ಕಾರಿ ಸೇವೆಗಳನ್ನು ಅಂತರ್ಜಾಲದ ಮೂಲಕ ಒದಗಿಸುವುದು, ತೆರಿಗೆ ವಸೂಲಿ, ವಾಹನ ನೊಂದಾವಣೆ, ವ್ಯಾಪಾರ ಪರವಾನಗಿ ಮುಂತಾದ ಅನೇಕ ಸಮಯ-ವ್ಯಯಿ ಕಾರ್ಯಗಳನ್ನು ಇಂದು ಇ-ಆಡಳಿತದ ವ್ಯಾಪ್ತಿಗೆ ತರಬಹುದಾಗಿದೆ. ಇದು ಸಾರ್ವಜನಿಕರಿಗೇ ಅಲ್ಲದೆ ಮಿತವ್ಯಯದಲ್ಲಿ ಸರ್ಕಾರಕ್ಕೂ ಕಾರ್ಯನಿರ್ವಹಿಸುವ ಅವಕಾಶವನ್ನು ನೀಡುತ್ತದೆ.

ಅಮೆರಿಕ ಮುಂತಾದ ಮುಂದುವರಿದ ರಾಷ್ಟ್ರಗಳಲ್ಲಿ ಇ-ಆಡಳಿತ ಅನೇಕ ಕ್ಷೇತ್ರಗಳಿಗೆ ವ್ಯಾಪಿಸಿದೆ. ನೌಕರಿಗಳ ಬಗ್ಗೆ ಮಾಹಿತಿ ಮತ್ತು ಅರ್ಜಿ ಸಲ್ಲಿಸುವಿಕೆ, ಆಯವ್ಯಯ ನಿರ್ವಹಣೆ, ಸ್ವಂತ ಉದ್ಯೋಗಕ್ಕೆ ಅರ್ಜಿ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಇ-ಆಡಳಿತವನ್ನು ಉಪಯೋಗಿಸಲಾಗುತ್ತಿದೆ. ಇ-ಆಡಳಿತದಿಂದ ನಮ್ಮ ದೇಶದಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೇನು ಲಾಭ? ಭಾರತದಂತಹ ವಿಶಾಲ ದೇಶದಲ್ಲಿ ಇ-ಆಡಳಿತವನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೆ ತರುವಲ್ಲಿ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳ ಪಾತ್ರ ಬಹುಮುಖ್ಯ. ಈ ಸಂಸ್ಥೆಗಳು ಐಟಿಯ ಬಳಕೆಯಿಂದ ತಮ್ಮ ಕಾರ್ಯನಿರ್ವಹಣೆ ಹೇಗೆ ಉತ್ತಮಗೊಳಿಸಬಹುದೆಂಬುದರ ಬಗ್ಗೆ ಸರ್ಕಾರವನ್ನು ಸರ್ಕಾರಗಳಿಗೆ ಸಾಕಷ್ಟು ಮಾಹಿತಿ ನೀಡಬೇಕು. ನಂತರ ಹತ್ತುಹಲವು ಐಟಿ ಸಂಸ್ಥೆಗಳು ಒಂದಾಗಿ ಸರ್ಕಾರದ ಮುಂದೆ ಇ-ಆಡಳಿತಕ್ಕೆ ಬೇಕಾದ ಸವಲತ್ತುಗಳನ್ನು ತಾವು ಹೇಗೆ ಒದಗಿಸಬಹುದು ಮತ್ತು ಅದರಿಂದ ಸರ್ಕಾರ ಮತ್ತು ಸಾರ್ವಜನಿಕರಿಗೆ ಆಗಬಹುದಾದ ಲಾಭಗಳೇನು ಎಂಬುದನ್ನು ವಿವರಿಸಬೇಕು. ಹೀಗಾದಲ್ಲಿ ಪೋರ್ಟಲ್ಸ್, ಖಾಸಗಿ ಅಂತರ್ಜಾಲಗಳು, ಸಿಆರ್‌ಎಮ್ ಮತ್ತು ಇ-ಶಿಕ್ಷಣ ಸೇವೆಗಳನ್ನು ದೊಡ್ಡ ಪ್ರಮಾಣದಲ್ಲಿ ಒದಗಿಸುವ ಅವಕಾಶ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳಿಗೆ ದೊರೆಯುತ್ತದೆ.

ಜಿ.ಪಿ. ವಿನಯಬಾಬು